ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಮರಳು ನೀತಿಯನ್ನು ನಾವು ತಂದಿದ್ದೇವೆ. ಅದರ ಅನುಗುಣವಾಗಿ ನದಿ ಮಧ್ಯ ಭಾಗಕ್ಕೆ ಹೋಗಿ ಅನಧಿಕೃತವಾಗಿ ಮರಳನ್ನು ತೆಗೆದು ನದಿ ಪಾತ್ರಕ್ಕೆ ತೊಂದರೆಯಾಗುವಂತ್ತಿದ್ದರೆ ಖಂಡಿತವಾಗಿ ಕ್ರಮ ಜರುಗಿಸುತ್ತೇವೆ.

ಭದ್ರಾವತಿ ತಾಲ್ಲೂಕಿನಲ್ಲಿ ಮೌಲ್ಯಧಾರಿತ ಮರಗಳ ಕಳ್ಳಸಾಗಾಣಿಕೆ

158(1063) ಶ್ರೀ ಸಂಗಮೇಶ್ವರ ಬಿ.ಕೆ (ಭದ್ರಾವತಿ) ಮಾನ್ಯ ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾವತಿ ತಾಲ್ಲೂಕಿನಲ್ಲಿರುವ ಬೀಟೆ, ನೀಲಗಿರಿ, ಸಾಗುವಾನಿ ಮುಂತಾದ ಮರಗಳನ್ನು ಕಳ್ಳ ಸಾಗಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಇದುವರೆಗೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು ;

ಇ) ಇಲಾಖೆಯಲ್ಲಿ ಅಧಿಕಾರಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಸಿ.ಹೆಚ್. ವಿಜಯಶಂಕರ್ (ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು) :

ಅ) ಹೌದು.

ಆ) ಕಳ್ಳಸಾಗಾಣಿಕೆಯನ್ನು ತಡೆಯಲು ಕ್ರಮ ಕೈಗೊಳ್ಳಲಾಗಿದ್ದು, ಭದ್ರಾವತಿ ತಾಲ್ಲೂಕಿನಲ್ಲಿ ಕಳ್ಳಸಾಗಾಣಿಕೆದಾರರ ಮೇಲೆ ಈಗಾಗಲೇ 2010-11 ನೇ ಸಾಲಿನಲ್ಲಿ ಇದುವರೆವಿಗೂ 65 ಪ್ರಕರಣಗಳಲ್ಲಿ ಅರಣ್ಯ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ಭದ್ರಾವತಿ ತಾಲ್ಲೂಕು ಅತಿ ಸೂಕ್ಷ್ಮ ಪ್ರದೇಶವಾಗಿದ್ದು, ತಲೆ ಹೊರೆ ಮತ್ತು ಎತ್ತುಗಳ ಮೂಲಕವೂ ಸಾಗಾಣಿಕೆ ನಡೆಯುತ್ತಿದ್ದು. ಅದನ್ನು ಸಹ ನಿಯಂತ್ರಣದಲ್ಲಿಡಲಾಗಿದೆ. ದಾಖಲಾಗಿರುವ ಅರಣ್ಯ ಮೊಕದ್ದಮೆಗಳ ವಿವರ ಈ ಕೆಳಕಂಡಂತಿದೆ.

ಕ್ರ ಸಂ.	ವಿವರ	ಅರಣ್ಯ ಮೊಕದ್ದಮೆ ಸಂಖ್ಯೆ	ಉತ್ಪನ್ನಗಳ ವಿವರ
1	ಟೀಕ್	12	3,971 ಎಂ3+ 52 ಪೋಲ್ಸ್
2	ಬೀಟೆ	20	9,577 ಎಂ3
3	ಇತರೆ	27	6,681 ಎಂ3 + 1500 ಕೆ.ಜಿ. ಸೌದೆ, 36 ಪೋಲ್ಸ್ + 528 ಬೊಂಬು
4	ವನ್ಯಜೀವಿ	04	2. ಚಿರತೆ ಚರ್ಮ + 1 ಜಿಂಕೆ ಚರ್ಮ
5	ಶ್ರೀಗಂಧ	02	14 ಕೆಜಿ
			14 ವಾಹನಗಳು

ಅದೂ ಅಲ್ಲದೇ ಭದ್ರಾವತಿ ವಿಭಾಗದಲ್ಲಿ ಅರಣ್ಯ ಉತ್ಪನ್ನಗಳ ಕಳ್ಳತನ ನಿಯಂತ್ರಿಸಲು 9 ಕಳ್ಳಬೇಟೆ ನಿಯಂತ್ರಣಾ ತಂಡಗಳನ್ನು ರಚನೆ ಮಾಡಲಾಗಿದೆ ಮತ್ತು ರಕ್ಷಣಾ ಸಿಬ್ಬಂದಿಯವರು ರಾತ್ರಿ ಹಗಲು ಗಸ್ತು ಮಾಡಿ ಕಳ್ಳ ನಾಟಾ ಸಾಗಾಣಿಕೆ ನಿಯಂತ್ರಣ ಮಾಡಲಾಗುತ್ತಿದೆ.

ಇ) ಹೌದು, ಖಾಲಿ ಇರುವ ಹುದ್ದೆಗಳನ್ನು ಆರ್ಥಿಕ ಇಲಾಖೆಯ ಸಮಾಲೋಚನೆಯೊಂದಿಗೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಬಿ.ಕೆ.ಸಂಗಮೇಶ್ವರ: ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿದೆ. ಭದ್ರಾವತಿ ತಾಲ್ಲೂಕಿನಲ್ಲಿ ಬೀಟೆ, ನೀಲಗಿರಿ, ಸಾಗುವಾನಿ ಮುಂತಾದ ಮರಗಳು ಕಳ್ಳ ಸಾಗಾಣಿಕೆ ಆಗುತ್ತಿರುವುದು ಸರ್ಕಾರಕ್ಕೆ ಗೊತ್ತಿದೆಯೇ ಎಂಬ ಪ್ರಶ್ನೆಗೆ 'ಹೌದು' ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ಇಲ್ಲಿಯವರೆಗೆ ಯಾವುದೇ ಕ್ರಮವನ್ನು ಜರುಗಿಸಿಲ್ಲ. ಆದರೆ, ಇವರು ಯಾರ ಮೇಲೆ ಕ್ರಮ ಜರುಗಿಸಿದ್ದಾರೆಂದರೆ, ಎತ್ತಿನಗಾಡಿ ಮೇಲೆ ಹೋಗಿ ಒಣ ಸೌದೆ ತರುವಂಥವರ ಮೇಲೆ ಮತ್ತು ಬಡವರು ಬೆಳಿಗ್ಗೆ ಹೋಗಿ ಸಂಜೆಯವರೆಗೆ ಸ್ವಲ್ಪ ಒಣ ಸೌದೆಯನ್ನು ತರುವವರ ಮೇಲೆ ಮತ್ತು ಮದುವೆ ಮನೆಗೋಸ್ಕರ

ತರತಕ್ಕಂಥವರ ಮೇಲೆ ಇವರು ಮೊಕದ್ದಮೆ ಹಾಕಿದ್ದಾರೆ. ಇಂತಿಂಥವರ ಮನೆಯಲ್ಲಿ ಮೌಲ್ಯಾಧಾರಿತವಾದ ಬೀಟೆ, ಶ್ರೀಗಂಧ, ಹೊನ್ನೆ ಮರಗಳನ್ನು ಇಟ್ಟುಕೊಂಡಿದ್ದಾರೆಂದು ಅಲ್ಲಿನ ಸ್ಕ್ವಾಡ್‌ನವರಿಗೆ ನಾನೇ ಖುದ್ದಾಗಿ ಹತ್ತಾರು ಬಾರಿ ತಿಳಿಸಿದ್ದೇನೆ. ಆದರೆ, ಫಾರೆಸ್ಟರ್ಸ್ ಮತ್ತು ವಾಚರ್‌ಗಳು ಇಂಥವರ ಮನೆಗಳಿಗೆ ಹಾಗೂ saw mill ಮತ್ತು ಮರ ಕಳ್ಳತನ ಮಾಡುವವರ ಜೊತೆ ಶಾಮೀಲಾಗಿದ್ದುಕೊಂಡು ಅವರುಗಳಿಗೆ ದೂರವಾಣಿ ಮಾಡಿ ನಾವು ಈಗ ಬರುತ್ತಿದ್ದೇವೆ, ಸ್ವಲ್ಪ ಹುಷಾರಾಗಿರಿ ಎಂದು ಹೇಳುತ್ತಾರೆ. ಅವರಿಗೆ ಮಾಹಿತಿ ದೊರಕಿದ ತಕ್ಷಣ ಅವರುಗಳು ಅದರ ಮೇಲೆ ಹುಲ್ಲು, ಗಿಡಗಳನ್ನು ಮುಚ್ಚಿಡುತ್ತಾರೆ. ಆನಂತರ, ಅಧಿಕಾರಿಗಳು ಅಲ್ಲಿಗೆ ಹೋಗಿ ನೋಡಿಕೊಂಡು ಬಂದೆವೆಂದು ಹೇಳುತ್ತಾರಷ್ಟೆ. ಈ ರೀತಿಯಾಗಿ ನಮ್ಮ ಭದ್ರಾವತಿ ತಾಲ್ಲೂಕಿನಲ್ಲಿ ನಡೆಯುತ್ತಿದೆ. ಇದನ್ನು ದಯವಿಟ್ಟು ತಪ್ಪಿಸಬೇಕಾಗಿರುವುದರಿಂದ ಇದರ ಬಗ್ಗೆ ಅಧಿಕಾರಿಗಳಿಗೆ, ಸ್ಕ್ವಾಡ್‌ನವರಿಗೆ ಹಾಗೂ ಡಿಎಫ್‌ಓ ಮತ್ತು ರೇಂಜರ್‌ಗಳಿಗೆ, ಫಾರೆಸ್ಟರ್‌ಗಳಿಗೆ ಕಟ್ಟುನಿಟ್ಟಾಗಿ ಮಾನ್ಯ ಸಚಿವರು ಆದೇಶವನ್ನು ಮಾಡಬೇಕು. ನಮ್ಮ ಭಾರತ ದೇಶ ಅರಣ್ಯ ಸಂಪತ್‌ಭರಿತವಾದ ದೇಶವಾಗಿದೆ. ಹಿಂದೆ ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು ಹೊರದೇಶದಲ್ಲಿ ಸಾಲ ಕೇಳುವುದಕ್ಕೆ ಹೋಗಿದ್ದಾಗ ಸಾಲದ ಹಣವನ್ನು ಹೇಗೆ ತೀರಿಸುತ್ತೀರೆಂದು ಅವರು ಕೇಳಿದ್ದಕ್ಕೆ, ನಮ್ಮ ಕರ್ನಾಟಕ ರಾಜ್ಯ, ಶಿವಮೊಗ್ಗ ಜಿಲ್ಲೆ, ಭದ್ರಾವತಿ ತಾಲ್ಲೂಕಿನಲ್ಲಿ ಮೌಲ್ಯಾಧಾರಿತ ಅರಣ್ಯ ಸಂಪತ್ತು ಇದೆ ಎಂದು ಹೇಳಿದ್ದರಂತೆ. ಆದರೆ, ಇವತ್ತಿನದಿವಸ ಈ ರೀತಿಯಾದ ಅರಣ್ಯ ಸಂಪತ್ತು ನಾಶವಾಗುತ್ತಿರುವುದು ನಮಗೆ ಬೇಜಾರಾಗುತ್ತಿದೆ. ಆದ್ದರಿಂದ, ಇದನ್ನು ತಡೆಗಟ್ಟುವುದಕ್ಕೆ ಮಾನ್ಯ ಸಚಿವರು ಕಾನೂನು ರೀತಿಯಲ್ಲಿ ಕ್ರಮ ಜರುಗಿಸಬೇಕು. ನಾನು ಖುದ್ದಾಗಿ ಹೇಳಿರುವಂಥದಕ್ಕೂ ಕೂಡ ಕ್ರಮ ಜರುಗಿಸಿಲ್ಲ. ಮತ್ತೆ ಸಿಬ್ಬಂದಿ ಕೊರತೆ ಇದೆ ಎಂದು ಸಹ ಹೇಳುತ್ತಿದ್ದಾರೆ. ಸಿಬ್ಬಂದಿ ಕೊರತೆ ಇರುವುದರಿಂದ ಅಲ್ಲಿಗೆ ದಯವಿಟ್ಟು ಸಿಬ್ಬಂದಿಗಳನ್ನು ಹಾಕಿ ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಹೆಚ್.ವಿಜಯಶಂಕರ್: ಮಾನ್ಯ ಅಧ್ಯಕ್ಷರೆ, ನಾನು ಕೊಟ್ಟಿರುವ ವಿವರಗಳನ್ನು ಗೌರವಾನ್ವಿತ ಸದಸ್ಯರು ಗಮನವಿಟ್ಟು ನೋಡಬೇಕು.

ಸೌದೆಗಳನ್ನು ತರುವಂಥವರ ಮೇಲೆ ಕೇವಲ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ, 12 ಟೀಕ್ ಪ್ರಕರಣಗಳಿಗೆ ಮೊಕದ್ದಮೆ ಹೂಡಿದ್ದೇವೆ. ಮತ್ತೆ ಬೀಟೆಗೆ ಸಂಬಂಧಪಟ್ಟಂತೆ 20 ಪ್ರಕರಣಗಳು, ಇತರೆ 27 ಪ್ರಕರಣಗಳು, ವನ್ಯಜೀವಿಗೆ ಸಂಬಂಧಪಟ್ಟಂತೆ 4 ಪ್ರಕರಣಗಳು ಮತ್ತು ಶ್ರೀಗಂಧಕ್ಕೆ ಸಂಬಂಧಪಟ್ಟಂತೆ 2 ಪ್ರಕರಣಗಳಿವೆ. ಈ ಎಲ್ಲ ಪ್ರಕರಣಗಳಿಗೆ ಈಗಾಗಲೇ ಮೊಕದ್ದಮೆ ಹೂಡಲಾಗಿದೆ. ಭದ್ರಾವತಿ ಭಾಗಗಳಲ್ಲಿ ಮೊದಲಿನಿಂದಲೂ ಸಹ ಈ ರೀತಿಯಾಗಿ ಸಣ್ಣಪುಟ್ಟ ಪ್ರಕರಣಗಳು ನಡೆಯುತ್ತಾ ಬಂದಿವೆ. ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಕಳ್ಳ ಬೇಟೆಯನ್ನು ತಡೆಗಟ್ಟಬೇಕೆಂಬ ಉದ್ದೇಶದಿಂದ 9 ಕಳ್ಳಬೇಟೆ ನಿಯಂತ್ರಣ ತಂಡಗಳನ್ನು ಮಾಡಿ ಇದಕ್ಕೆ ಬೇಕಾಗಿರುವಂಥ ಎಲ್ಲಾ ಅಗತ್ಯ ಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. ಈ ವಿಚಾರದ ಬಗ್ಗೆ ನಮ್ಮ ಅಧಿಕಾರಿಗಳ ಜೊತೆ ನಾನು ಸುದೀರ್ಘವಾಗಿ ಚರ್ಚೆ ಮಾಡಿದ್ದೇನೆ. ಮತ್ತೆ ಅಲ್ಲಿನ ಸ್ಥಳೀಯ ಪರಿಸ್ಥಿತಿಯನ್ನು ಸಹ ನಾನು ಸ್ವತ: ಅವಲೋಕನ ಮಾಡುತ್ತೇನೆ. ಈ ಹಂತದಲ್ಲಿ ಇನ್ನು ಏನೇನು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆಯೋ ಅವೆಲ್ಲವನ್ನೂ ಹಾಗೂ ಇದನ್ನು ತಡೆಗಟ್ಟುವುದಕ್ಕೆ ಸರ್ಕಾರ ಏನೇನು ಮಾಡಬಹುದೆಂಬುದರ ಬಗ್ಗೆ ಕೂಡ ನಾನು ವೈಯಕ್ತಿಕವಾಗಿ ಪರಿಶೀಲನೆ ಮಾಡಿ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ನಾನು ಬದ್ಧನಾಗಿದ್ದೇನೆ. ಎರಡನೆಯದಾಗಿ, ಮಾನ್ಯ ಸದಸ್ಯರು ಸಿಬ್ಬಂದಿಯ ಕೊರತೆ ಬಗ್ಗೆ ಹೇಳಿದ್ದಾರೆ. ಸ್ವಲ್ಪ ಪ್ರಮಾಣದಲ್ಲಿ ಸಿಬ್ಬಂದಿಗಳ ಕೊರತೆ ಇದೆ. ಸಿಬ್ಬಂದಿ ಕೊರತೆಯನ್ನು ತುಂಬುವುದಕ್ಕೆ ನಾವು ತತ್‌ಕ್ಷಣ ಗಮನವನ್ನು ನೀಡುತ್ತೇನೆಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಬಿ.ಕೆ.ಸಂಗಮೇಶ್: ಮಾನ್ಯ ಅಧ್ಯಕ್ಷರೆ, ನಾವು information ಕೊಟ್ಟು ಇಂತಿಂಥ ಕಡೆ ಮರ ಇದೆ ಹೋಗಿ ಹಿಡಿಯಿರಿ ಎಂದರೆ ಏಕೆ ಹೋಗಿ ಹಿಡಿಯುತ್ತಿಲ್ಲ. ಸ್ಟ್ಯಾಡ್‌ನವರು ಹಿಡಿಯುತ್ತಿಲ್ಲ, ಇವರಿಗೆ ಹೇಳಿದರೆ regular forester ಗೆ ಹೇಳುತ್ತಾರೆ, ಇವರು ಪೊಲೀಸ್‌ನವರಿಗೆ ಕೇಳಿ ಎಂದು ಹೇಳುತ್ತಾರೆ. ಇದು ಆಗಬಾರದು, ನಮ್ಮ ದೇಶದ ಅರಣ್ಯ ಸಂಪತ್ತು. ಲೋಕಲ್‌ನಲ್ಲಿ ಏನೊ ಪ್ರಾಬ್ಲಮ್ ಇದೆ ಎಂದು ಹೇಳುತ್ತಾರೆ, ಅಲ್ಲಿ ಏನೂ

ಪ್ರಾಬ್ಲಮ್ ಇಲ್ಲ. ಯಾರ influence, ಯಾರ ಮುಲಾಜು, ಯಾವ ರಾಜಕಾರಣವು ಬೇಡ ಕಾನೂನು ರೀತಿಯಲ್ಲಿ ಕ್ರಮ ಜರುಗಿಸುವುದಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಡಲಿ.

ಶ್ರೀ ಸಿ.ಹೆಚ್.ವಿಜಯಶಂಕರ: ಮಾನ್ಯ ಅಧ್ಯಕ್ಷರೆ, ನನಗೂ ಕೂಡ ಯಾವುದೇ ಮುಲಾಜು ಇಲ್ಲ. ಈ ಎಲ್ಲಾ ವಿಷಯಗಳನ್ನು ನಾನು ಕೂಲಂಕಷವಾಗಿ ಪರಿಶೀಲನೆ ಮಾಡುತ್ತೇನೆ. ಮಾನ್ಯ ಸದಸ್ಯರ ಭಾವನೆಗಳನ್ನು ಹಂಚಿಕೊಳ್ಳುವುದಕ್ಕೆ ನಾನು ಬದ್ಧನಾಗಿದ್ದೇನೆ. ಈ ಸಂಪತ್ತನ್ನು ಕಾಪಾಡುವುದಕ್ಕೆ ಎಲ್ಲಾ ರೀತಿಯ ನಿರ್ದಾಕ್ಷಿಣ್ಯ ಕ್ರಮಗಳನ್ನು ನಾನು ತೆಗೆದುಕೊಳ್ಳುತ್ತೇನೆ.

ದ.ಕನ್ನಡ ಜಿಲ್ಲೆಯ ಬೀಡಿ ಕಾರ್ಮಿಕರ ಮೂಲಭೂತ ಸೌಕರ್ಯ

159(1121) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಬೀಡಿ ತಯಾರಿಕಾ ಕೈಗಾರಿಕೆಗಳಲ್ಲಿ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ; ಅವು ಯಾವುವು ;

ಆ) ಬೀಡಿ ಕಾರ್ಮಿಕ ಕುಟುಂಬಗಳ ವಾಸಕ್ಕಾಗಿ ಸರ್ಕಾರ ಮನೆಗಳನ್ನು ನಿರ್ಮಿಸಿಕೊಡಲು ಉದ್ದೇಶಿಸಿದೆಯೇ ;

ಇ) ಹಾಗಿದ್ದಲ್ಲಿ, ಯಾವ ಯೋಜನೆಯಡಿ ಫಲಾನುಭವಿಗಳನ್ನು ಗುರುತಿಸಲಾಗುವುದು ?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 85 ಬೀಡಿ ತಯಾರಿಕಾ ಕೈಗಾರಿಕೆಗಳಲ್ಲಿ ಬೀಡಿ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ.

ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಹೌದು.

ಇ) ಕೇಂದ್ರ ಸರ್ಕಾರವು ಜಾರಿಗೊಳಿಸಿರುವ ಪರಿಷ್ಕೃತ ಸಮಗ್ರ ವಸತಿ ಯೋಜನೆ ಅಡಿಯಲ್ಲಿ ಫಲಾನುಭವಿಗಳನ್ನು ಗುರುತಿಸಲಾಗುತ್ತಿದೆ.